# ಅಂತಿಂಥ ರಾಣಿ ಇವರಲ್ಲ!



■ ಪ್ರವೀಣ ಕುಲಕರ್ಣಿ

ಒಂದು ಪುಟ್ಟ ಫ್ಲ್ಯಾಶ್‌ಬ್ಯಾಕ್ – ಅದು ಎಪ್ಪತ್ತು ವರ್ಷಗಳ ಹಿಂದಿನ ಮಾತು. ಇಂಗ್ಲೆಂಡಿನ ರಾಜಕುವರಿಯೊಬ್ಬಳು ಅಂದು ಕೀನ್ಯಾದ ದಟ್ಟಾರಣ್ಯದಲ್ಲಿ ನಿರ್ಮಿಸಿದ್ದ ಮರದ ಮೇಲಿನ ಲಾಡ್ಜ್‌ನಲ್ಲಿ ಉಳಿದುಕೊಂಡು, ಕಾಡುಪ್ರಾಣಿಗಳ ಕ್ರೀಡೆಯನ್ನು ನೋಡುವಲ್ಲಿ ತಲ್ಲೀನನಾಗಿದ್ದಳು. ಮಾರನೇ ದಿನ ಆಕೆ ಆ ಮರದ ಲಾಡ್ಜ್‌ನಿಂದ ಕೆಳಗಿಳಿಯುವ ಹೊತ್ತಿಗೆ ಯುನೈಟೆಡ್ ಕಿಂಗ್ಡಮ್ (ಇಂಗ್ಲೆಂಡ್) ಹಾಗೂ ಕಾಮನ್‌ವೆಲ್ತ್ ದೇಶಗಳ (ಕೆನಡಾ, ನ್ಯೂಜಿಲೆಂಡ್, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ ಮತ್ತು ಶ್ರೀಲಂಕಾ ಸೇರಿ) ರಾಣಿಯಾಗಿದ್ದಳು! ಆಗ ಅವಳಿಗೆ ಸಿಕ್ಕ ಮಾಹಿತಿ – ತನ್ನ ತಂದೆ ಜಾರ್ಜ್–VI ನಿಧನ ಹೊಂದಿದ್ದು. ಹಾಗೆ ತಾನು ರಾಣಿಯಾದ ಸುದ್ದಿಯನ್ನು ತುಂಬಾ ಸಂದಿಗ್ಧ ಸನ್ನಿವೇಶದಲ್ಲಿ ಪಡೆದವರು ಕ್ವೀನ್ ಎಲಿಜಬೆತ್–II.

ರಾಣಿಯಾಗಿ ಅತಿ ಹೆಚ್ಚು ಕಾಲ ಕಳೆದ ಚಾರಿತ್ರಿಕ ದಾಖಲೆಯನ್ನು ತಮ್ಮ ಹೆಸರಿಗೆ ಬರೆಯಿಸಿಕೊಂಡಿರುವ ಕ್ವೀನ್ ಎಲಿಜಬೆತ್–II, ಸಿಂಹಾಸನ ಏರಿ ಈಗ ಭರ್ತಿ 70 ವರ್ಷ. ಅವರ ತಂದೆ ಜಾರ್ಜ್–VI ಅವರು ಸ್ಯಾಂಡ್ರಿಂಗ್‌ಹ್ಯಾಮ್ ತೋಟದ ಮನೆಯಲ್ಲಿ 1952ರ ಫೆಬ್ರುವರಿ 6ರಂದು ನಿಧನ ಹೊಂದಿದ್ದರು. ಆ ಸಂದರ್ಭದಲ್ಲೇ ಎಲಿಜಬೆತ್–II ಅವರನ್ನು ರಾಣಿಯಾಗಿ ಘೋಷಿಸಲಾಗಿತ್ತು. ಸಿಂಹಾಸನದ ಮೇಲೆ ಏಳು ದಶಕ ಕಳೆದಿರುವ 95 ವರ್ಷದ ಈ ರಾಣಿ, ತಾವು ಗದ್ದುಗೆಗೇರಿದ ಆ ಭಾವುಕ ಕ್ಷಣಗಳನ್ನು ಮೆಲುಕು ಹಾಕಲು ಫೆಬ್ರುವರಿ 6ರಂದು ಸ್ಯಾಂಡ್ರಿಂಗ್‌ಹ್ಯಾಮ್ ತೋಟದ ಮನೆಗೇ ಹೋಗಿದ್ದರು.

‘ವ್ಯಕ್ತಿಗತವಾಗಿ ಯೋಚಿಸುವುದಕ್ಕಿಂತಲೂ ದೇಶದ ಒಳಿತಿಗಾಗಿ ಯೋಚಿಸುವುದು ರಾಣಿಯ ಹೆಗ್ಗುರುತು. ದೇಶದ ಪ್ರಜೆಗಳ ಕರ್ತವ್ಯಪ್ರಜ್ಞೆಯನ್ನು ಜಾಗೃತಗೊಳಿಸಿದವರೂ ಅವರು’ ಎಂದು ಇಂಗ್ಲೆಂಡ್‌ನ ಗಣ್ಯಾತಿಗಣ್ಯರು ರಾಣಿಯ ವ್ಯಕ್ತಿತ್ವವನ್ನು ಕೊಂಡಾಡಿದ್ದಾರೆ. ಬ್ರೆಕ್ಸಿಟ್‌ನಂತಹ (ಯುರೋಪ್ ಒಕ್ಕೂಟದಿಂದ ಇಂಗ್ಲೆಂಡ್ ಹೊರಬಂದ) ವಿದ್ಯಮಾನವೇ ಇರಬಹುದು, ಕೋವಿಡ್ ಸಾಂಕ್ರಾಮಿಕದ ಅಬ್ಬರವೇ ಇರಬಹುದು, ದೇಶದ ಜತೆ ನಿಂತ ಧೀಮಂತ ನಾಯಕಿ ಆಕೆ. ದಕ್ಷಿಣ ಆಫ್ರಿಕಾ, ಶ್ರೀಲಂಕಾ ಸೇರಿದಂತೆ ಹಲವು ದೇಶಗಳನ್ನು ವಸಾಹತು ಆಡಳಿತ ವ್ಯವಸ್ಥೆಯಿಂದ ಮುಕ್ತಗೊಳಿಸಿದ್ದೂ ಇದೇ ರಾಣಿ.

ಪತಿ ಫಿಲಿಪ್ ಅವರನ್ನು ಕಳೆದ ಏಪ್ರಿಲ್‌ನಲ್ಲೇ ಕಳೆದುಕೊಂಡಿರುವ ಈ ರಾಣಿ, ಸದ್ಯ ವಯೋಸಹಜ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿರುವುದು ಸುಳ್ಳಲ್ಲ. ಆದ್ದರಿಂದಲೇ ಸಾರ್ವಜನಿಕವಾಗಿ ಅವರು ಕಾಣಿಸಿಕೊಳ್ಳುವುದು ಈಚಿನ ದಿನಗಳಲ್ಲಿ ತುಂಬಾ ಅಪರೂಪವಾಗಿದೆ. ಎಲಿಜಬೆತ್ ಮತ್ತು ಫಿಲಿಪ್ ಅವರದು 73 ವರ್ಷಗಳ ಸುದೀರ್ಘ ದಾಂಪತ್ಯ ಜೀವನ. ಆಕೆ, 13 ವರ್ಷದ ಬಾಲಕಿಯಾಗಿದ್ದಾಗಲೇ **Fell in love with Philip** (ಫಿಲಿಪ್ ಜತೆ ಪ್ರೇಮಬಂಧನದಲ್ಲಿ ಬಿದ್ದಿರುವೆ) ಎಂದು ಅರಮನೆಯಲ್ಲಿ ಗಟ್ಟಿಯಾಗಿ ಹೇಳಿದ್ದರು.

ರಾಜಕುಟುಂಬದ ಆ ಅದ್ದೂರಿ ಮದುವೆಯಲ್ಲಿ ಅತ್ಯಂತ ಬೆಲೆಬಾಳುವ 2,500 ಕಾಣಿಕೆಗಳು ಜಗತ್ತಿನ ಬೇರೆ ಬೇರೆ ಭಾಗಗಳಿಂದ ಬಂದಿದ್ದವು. ಈ ದಂಪತಿಗೆ ನಾಲ್ವರು ಮಕ್ಕಳಿದ್ದಾರೆ. ಅವರಿಂದ ಸಾಕಷ್ಟು ನೋವನ್ನೂ ರಾಣಿ ಉಂಡಿದ್ದಾರೆ. ಸೊಸೆ ಡಯಾನಾ ಸಾವು, ಮೊಮ್ಮಗನ ಪತ್ನಿ ರಾಜ ಮನೆತನದ ಮೇಲೆ ಮಾಡಿದ ಜನಾಂಗೀಯ ನಿಂದನೆಯ ಆರೋಪ, ಅಧಿಕಾರ–ಆಸ್ತಿಗಾಗಿ ಕೌಟುಂಬಿಕ ಕಲಹ, ಮೊದಲಾದ ಸಂಕಷ್ಟಗಳನ್ನು ಎದುರಿಸಿದರೂ ಸ್ಥಿರವಾಗಿ ನಿಂತವರು ಈ ರಾಣಿ. ಬಕಿಂಗ್ ಹ್ಯಾಮ್ ಅರಮನೆಯ ಗೌರವ, ವಿವಾದಗಳ ಪ್ರವಾಹದಲ್ಲಿ ಕೊಚ್ಚಿ ಹೋಗದಂತೆ ತಡೆದವರೂ ಅವರು.

ಬಾಲ್ಯದಲ್ಲಿ ಎಲಿಜಬೆತ್ ಅವರನ್ನು ಅವರ ತಂದೆ ಶಾಲೆಗೆ ಕಳುಹಿಸಲಿಲ್ಲ. ಅರಮನೆಯಲ್ಲೇ ಶಿಕ್ಷಣಕ್ಕೆ ಬೇಕಾದ ವ್ಯವಸ್ಥೆ ಮಾಡಿದ್ದರು. ಎರಡನೇ ಜಾಗತಿಕ ಸಮರದಲ್ಲಿ ಬಾಂಬ್‌ಗಳ ಸುರಿಮಳೆ ಹೆಚ್ಚಿತ್ತು. ಅಪಾಯ ಎದುರಿಸದಿರಲು ಎಲಿಜಬೆತ್ ಅವರನ್ನು ಕೆನಡಾಕ್ಕೆ ಕಳುಹಿಸಿಕೊಡುವ ಕುರಿತು ಚರ್ಚೆ ಆಗುತ್ತಿತ್ತು. ಆದರೆ, ಇಂಗ್ಲೆಂಡ್‌ನಲ್ಲೇ ಉಳಿದ ಅವರು ಬ್ರಿಟಿಷ್ ಸಶಸ್ತ್ರ ಪಡೆಯಲ್ಲಿ ಸೇವೆಗೆ ಸೇರಿದರು. ಅವರು ಟ್ರಕ್ ಚಾಲಕಿಯಾಗಿ, ಮೆಕ್ಯಾನಿಕ್ ಆಗಿ ಕೆಲಸ ಮಾಡಿದ್ದನ್ನು ಆಗಿನ ಸೇನಾಧಿಕಾರಿಗಳು ಸ್ಮರಿಸಿಕೊಂಡಿದ್ದರು. ‘ಸೈನಿಕರಿಗೆ ನನ್ನಿಂದಾದ ನೆರವು ನೀಡಲು ಯತ್ನಿಸಿದ್ದೆ ಅಷ್ಟೆ’ ಎಂದು ರಾಣಿ ಆ ಘಟನೆಯನ್ನು ವಿನೀತರಾಗಿ ನೆನಪಿಸಿಕೊಂಡಿದ್ದರು.

ತಮ್ಮ ಆಡಳಿತಾವಧಿಯಲ್ಲಿ ಅವರು ಇದುವರೆಗೆ 14 ಪ್ರಧಾನಿಗಳನ್ನು ಕಂಡಿದ್ದಾರೆ. ಹಾಲಿ ಪ್ರಧಾನಿ ಬೋರಿಸ್ ಜಾನ್ಸನ್ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ಅವಕಾಶ ಸಿಕ್ಕಿದ್ದರೆ, ಈ ವೇಳೆಗಾಗಲೇ ಹದಿನೈದನೆಯ ಪ್ರಧಾನಿಯನ್ನೂ ಅವರು ಕಂಡಿರುತ್ತಿದ್ದರು. ಅಂದಹಾಗೆ, ಈ ರಾಣಿಯಷ್ಟು ಜಗತ್ತನ್ನು ಸುತ್ತಿದ್ದ ಬೇರೊಬ್ಬ ನಾಯಕ/ನಾಯಕಿ ಇಲ್ಲ. ಶ್ವಾನಪ್ರೇಮಿಯಾದ ಅವರು 30 ನಾಯಿಗಳನ್ನೂ ಸಾಕಿದ್ದಾರೆ. ರಾಣಿಯಿಂದ ನೆರವು ಪಡೆದವರಿಗೆ ಲೆಕ್ಕವಿಲ್ಲ ಎನ್ನುತ್ತಾರೆ ಅರಮನೆಯ ಅಂತಃಪುರದ ಅಧಿಕಾರಿಗಳು.

ಬಾಳಸಂಧ್ಯೆಯಲ್ಲಿರುವ ಅವರು, ತಮ್ಮ ಸೊಸೆಯನ್ನು ಮುಂದಿನ ರಾಣಿ ಎಂದು ಘೋಷಿಸಿದ್ದಾರೆ. ಬದುಕಿನಲ್ಲಿ ಎಲ್ಲವನ್ನೂ ಕಂಡಿರುವ, ಜಗತ್ತನ್ನೇ ಸುತ್ತಿರುವ ಈ ಹಣ್ಣು ಜೀವಕ್ಕೆ ಈಗ ಬಕಿಂಗ್ ಹ್ಯಾಮ್ ಅರಮನೆಯ ಅಂಗಳದಲ್ಲೂ ಓಡಾಡಲು ಸಾಧ್ಯವಾಗುತ್ತಿಲ್ಲ. ಸಿಂಹಾಸನ ಏರಿದ ಏಳು ದಶಕಗಳ ಸಂಭ್ರಮಾಚರಣೆಗೆ ಸಿದ್ಧತೆಗಳು ನಡೆಯುತ್ತಿವೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65